# ರಾಮಾಯಣದಲ್ಲಿ ಮೌಲ್ಯವ್ಯವಸ್ಥೆ

ಸ್ವಾಮಿ ಅಮೃತಾನಂದ

ರಾಮಾಯಣದಲ್ಲಿ ಕಂಡುಬರುವ ಉನ್ನತ ಮೌಲ್ಯಗಳ ಪರಿಚಯವನ್ನು ಮಾಡಿಕೊಟ್ಟಿರುವ ಪೂಜ್ಯ ಸ್ವಾಮಿ ಅಮೃತಾನಂದಜಿಯವರು ವಿಶಾಖಪಟ್ಟಣದಲ್ಲಿರುವ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವರು.

ಇಂಗ್ಲಿಷಿನ value ಎಂಬ ಪದಕ್ಕೆ ಅನೇಕ ಅರ್ಥಗಳಿವೆ: ಬೆಲೆ, ಪ್ರಯೋಜನ, ಅತ್ಯವಶ್ಯ ಗುಣ ಇತ್ಯಾದಿ. ಈ ಪದ ಅಸ್ಪಷ್ಟ ಅರ್ಥವುಳ್ಳದ್ದಾಗಿರುವುದರಿಂದಲೇ ವೈಯಕ್ತಿಕ, ಸಾಮಾಜಿಕ, ವೈಜ್ಞಾನಿಕ ಇತ್ಯಾದಿ ಕ್ಷೇತ್ರಗಳಿಗೆ ಸಂಬಂಧಿಸಿದ ವಿವಿಧ ಮೌಲ್ಯಗಳಿವೆ. ಸಾಮಾಜಿಕ ದೃಷ್ಟಿಕೋನವನ್ನು ಬದಲಾಯಿಸಲು ಸಾಧನವಾಗಿ ಮೌಲ್ಯಗಳನ್ನು ಬಳಸಲು ಹೊರಟರೆ ಮೌಲ್ಯವ್ಯವಸ್ಥೆಯ ಬಗೆಗೇ ಆಳವಾದ ಚಿಂತನೆ ಮಾಡುವುದು ಅಗತ್ಯ. ಏಕೆಂದರೆ, ವ್ಯಕ್ತಿಯ ಮೌಲ್ಯಚಿಂತನದ ಮೇಲೆ ಪ್ರಭಾವ ಬೀರದಿದ್ದರೆ, ಸಮಾಜ ಸುಧಾರಣೆ ಅಸಾಧ್ಯ. ಮೌಲ್ಯವು, ಒಬ್ಬ ಹೊಂದಬಹುದಾದ ದೃಷ್ಟಿಯಲ್ಲಿ, ಗುಣ ಹಾಗೂ ಸಮಾಜದ ಹಲವರು ಅಗತ್ಯವೆಂದು ನಿರ್ಧರಿಸುವಂತಹುದು. ಸಾಂಸ್ಕೃತಿಕ ದೃಷ್ಟಿಕೋನದ ಮೇಲೆ ಆಧರಿಸಿದಂತಹದು ಮೌಲ್ಯ. ಒಬ್ಬನ ಸಮಕಾಲೀನ ಸಂದರ್ಭದಲ್ಲಿ ಮಾತ್ರ ಇದು ಪ್ರಸ್ತುತವಾಗುವಂತಹುದು.

ಮಾನವ ಏಕಾಕಿಯಲ್ಲ. ಸಮಾಜವೆಂಬ ಸಂಘದ ಸದಸ್ಯ. ವಿವಾಹ, ಕುಟುಂಬ, ರಾಜ್ಯ—ಇವುಗಳೆಲ್ಲ ವ್ಯಕ್ತಿಯು ಇತರರ ಜತೆ ಸಮರಸದಿಂದಿರಲು ಅನುಕೂಲಿಸುವಂತಹ ವ್ಯವಸ್ಥೆಗಳು. ಅವನ ಆಸೆ ಆಕಾಂಕ್ಷೆಗಳು ಸಮಾಜದ ಜತೆ ಸಂಘರ್ಷಕ್ಕಿಳಿಯಬಾರದು. ಸಂಘರ್ಷ ಬಂದಾಗಲೂ ಸಮಾಜದ ಹಿತಕ್ಕೆ ವ್ಯಕ್ತಿಹಿತ ಅಡಿಯಾಳಾಗಬೇಕು—ಬಹುಜನ ಹಿತಾಯ ಬಹುಜನ ಸುಖಾಯ. ತನ್ನ ಹಿತವನ್ನು ಕಡೆಗಣಿಸಿ ಸಮಾಜಕ್ಕೆ ಹಿತ ಮಾಡುವವ ನಾಯಕ, ಅವನ ಜೀವನ ಮೌಲ್ಯಯುಕ್ತ.

ವಿವಿಧ ಸಂಸ್ಕೃತಿಗಳಲ್ಲಿ ಮೌಲ್ಯವ್ಯವಸ್ಥೆ ಬೇರೆ ರೀತಿಗಳಲ್ಲಿದೆ. ಪುರಾತನ ಸಂಸ್ಕೃತಿಗಳು ತಮ್ಮ ಅನುಯಾಯಿಗಳ ಮನದಲ್ಲಿ ಖಚಿತ ಮೌಲ್ಯಗಳು ಧಾರ್ಮಿಕವಾಗಿ ಬೇರುಬಿಡುವಂತೆ ಮಾಡಿವೆ. ಹೀಗೆ ಎಲ್ಲಿ ಧರ್ಮದ ಹಿಡಿತ ಬಲವಾಗಿ ಇರುವುದೋ ಅಲ್ಲಿ ನೈತಿಕ ಮೌಲ್ಯಗಳು ಬಲವಾಗಿವೆ. ಕಾಲಕಾಲಕ್ಕೆ ಬದಲಾದರೂ ಮಾನವ ಪ್ರಕೃತಿಗೆ ಮೂಲಭೂತವಾಗಿ ಹಿಡಿಸುವಂತಹ ಏನನ್ನೋ ಅವು ಹೊಂದಿವೆ. ಆಧುನಿಕ ಕಾಲದಲ್ಲಿ ನಡೆಯುತ್ತಿರುವ ಮೌಲ್ಯಗಳ ಅಧ್ಯಯನ ಕೇವಲ ತೋರಿಕೆಯದಾಗಿದೆ, ಅದರಲ್ಲಿ ಆಳವಿಲ್ಲ. ಆದ್ದರಿಂದ ಸಾಮಾಜಿಕ ದೃಷ್ಟಿಯನ್ನು ಬದಲಿಸುವ ಸಾಮರ್ಥ್ಯವನ್ನು ಅದು ಹೊಂದಿಲ್ಲ.

ಪೂರ್ವಕಾಲದಲ್ಲಿ ಮೌಲ್ಯಗಳ ಅಧ್ಯಯನ ಮಾನವನ ಪ್ರಕೃತಿಯನ್ನು ಅವಲಂಬಿಸಿತ್ತು. ಮಾನವನು ಅಂತರಂಗದಲ್ಲಿ ವಿಕಾಸ ಹೊಂದಿ, ತನ್ನ ಸ್ವಭಾವವನ್ನು ಅರಿತು ಸತ್ಯವನ್ನು ಸಾಕ್ಷಾತ್ಕರಿಸಲು ಅನುವಾಗಿತ್ತು. ನಮ್ಮ ಪುರಾತನ ಸಂಸ್ಕೃತಿಯ ಕೇಂದ್ರವಿಚಾರವು ಧರ್ಮವಾಗಿದ್ದು, ಮೌಲ್ಯವ್ಯವಸ್ಥೆ ಅದಕ್ಕೆ ಅಧೀನವಾಗಿದೆ. ಧರ್ಮವು ಪ್ರತಿಯೊಬ್ಬರಿಗೂ ಬೇರೆ ಬೇರೆ ಆಗಿದ್ದರೂ ಸಮಾಜದ ಹಿತ ಮುಖ್ಯ; ವೈಯಕ್ತಿಕ ಧರ್ಮಗಳು ಸಮಾಜದ ಹಿತವನ್ನು ಎತ್ತಿಹಿಡಿಯುವ ಗುರಿಯನ್ನೇ ಹೊಂದಿವೆ.

ರಾಷ್ಟ್ರೀಯ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳ ಅಧ್ಯಯನದೊಂದಿಗೆ ಹಿಂದೆ ನಮ್ಮ ಶಿಕ್ಷಣ ಮೊದಲಾಗುತ್ತಿತ್ತು. ಇವು ಶತಮಾನಗಳಿಂದ ಭಾರತೀಯರ ವ್ಯಕ್ತಿತ್ವವನ್ನು ರೂಪಿಸಿವೆ, ಸಮಾಜದ ಐಕ್ಯತೆಗೆ ಕಾರಣವಾಗಿವೆ. ಕಲೆ, ಸಂಗೀತ ಸಾಹಿತ್ಯಗಳು ಇವುಗಳಿಂದ ಪ್ರಭಾವಿತವಾಗಿವೆ. ಜೀವನದ ಗುರಿ ಜ್ಞಾನವೇ ವಿನಾ ಸುಖವಲ್ಲ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಭಾರತೀಯರ ಅತಿ ಪವಿತ್ರ ಗಾಯತ್ರಿಯೂ ಜ್ಞಾನಕ್ಕಾಗಿ ಪ್ರಾರ್ಥನೆ. ಈ ಕಾವ್ಯಗಳು ವಿನಯ, ಪ್ರಾಮಾಣಿಕತೆ, ದಯೆ, ಮಹನೀಯತೆಗಳಂತಹ ಮೌಲ್ಯಗಳನ್ನು ಬೆಳೆಸಲು ಪ್ರಯತ್ನಿಸುತ್ತವೆ. ಮಹಾಭಾರತದಲ್ಲಿನ ಭಗವದ್ಗೀತೆ ಗಾಂಧೀಜಿ ಮೊದಲಾದ ರಾಜಕಾರಣಿಗಳನ್ನು ಸ್ಫೂರ್ತಿಗೊಳಿಸಿತು. ಗೀತೆಯು ನಿರ್ಧಾರದ ಶಕ್ತಿಯನ್ನು ಎತ್ತಿಹಿಡಿಯುತ್ತದೆ. ತನ್ನ ಸಮನ್ವಯಾತ್ಮಕ ತತ್ತ್ವಚಿಂತನೆಯ ಜತೆಗೇ ನಾಯಕತ್ವದ ಗುಣಗಳ ಬಗೆಗೆ ಚರ್ಚೆ ನಡೆಸುತ್ತದೆ. ಈಚೆಗೆ ಗೀತೆಯು ವ್ಯವಸ್ಥಾಪಕ ವಿಜ್ಞಾನ, ಮನೋವಿಜ್ಞಾನಗಳ ಪುಸ್ತಕವಾಗಿ ಹೆಚ್ಚಿನ ಮೌಲ್ಯವುಳ್ಳದ್ದು ಎಂದು ನಿರ್ಧರಿಸಲಾಗಿದೆ. ತುಂಬ ಸಂಕಟಕರ ದ್ವಂದ್ವಗಳ ಸನ್ನಿವೇಶಗಳನ್ನು ನಿರ್ಮಿಸಿ, ಧರ್ಮಪರವಾದ ನಿರ್ಣಯದ ಶಕ್ತಿಯನ್ನು ಮಹಾಭಾರತ ಎತ್ತಿಹಿಡಿಯುತ್ತದೆ. ಇಲ್ಲಿ ಗಾಂಧಾರಿಯು ಮಗನನ್ನು ಜಯಶಾಲಿಯಾಗು ಎಂದು ಹರಸಲಾರಳು; ಧರ್ಮ ಎಲ್ಲಿದೆಯೋ ಅಲ್ಲಿ ಜಯ ಎನ್ನುವಳು. ವ್ಯಾಸ ವಾಲ್ಮೀಕಿಯರ ಮೌಲ್ಯಶಿಕ್ಷಣ ಶತಮಾನಗಳ ತಾಳಿಕೆಯುಳ್ಳದ್ದು.

ಸಂಸ್ಕೃತದ ಮೊದಲ ಕಾವ್ಯ ರಾಮಾಯಣ, ಇದು ನೀತಿ, ನಡತೆ, ಮೌಲ್ಯಗಳ ಗಣಿ, ಧರ್ಮದ ವಿವಿಧ ಮುಖಗಳನ್ನು ಕಾಣಿಸುವ ಪ್ರಾಯೋಗಿಕ ಧರ್ಮಶಾಸ್ತ್ರ. ಭಾರತದಲ್ಲಿ ಮಾತ್ರವಲ್ಲದೆ ಮಲೇಷಿಯಾ ಮೊದಲಾದ ರಾಷ್ಟ್ರಗಳಲ್ಲೂ ಇದರ ಪ್ರಭಾವವನ್ನು ಕಾಣಬಹುದು. ಇಲ್ಲಿ ರಾಮನನ್ನು ಪುರುಷೋತ್ತಮನನ್ನಾಗಿ ಚಿತ್ರಿಸಲಾಗಿದೆ.

ರಾಮಾಯಣದ ಆರಂಭದಲ್ಲಿ ವಾಲ್ಮೀಕಿ ತನ್ನ ಮನಸ್ಸಿನಲ್ಲಿದ್ದ

ಆದರ್ಶಗಳ ಪಟ್ಟಿ ಮಾಡಿ ಈ ಗುಣಗಳುಳ್ಳ ಯಾರಾದರೂ ಇದ್ದಾರೆಯೇ ಎಂದು ಗುರು ನಾರದರನ್ನು ಕೇಳುತ್ತಾನೆ :

**ತಪಸ್ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್ ।**
**ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥**
**ಕೋ ನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್ ।**
**ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥**
**ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ ।**
**ವಿದ್ವಾನ್ ಕಃ ಕಸ್ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥**
**ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋಽನಸೂಯಕಃ ॥**
**ಕಸ್ಯಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥**
**ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ।**
**ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂ ವಿಧಂ ನರಮ್ ॥**

"'ಈಗ ಗುಣವಂತನೂ, ವೀರ್ಯವಂತನೂ, ಧರ್ಮಜ್ಞನೂ, ಕೃತಜ್ಞನೂ, ಸತ್ಯವಾಕ್ಯನೂ, ದೃಢವ್ರತನೂ, ಯುಕ್ತಚರಿತನೂ, ಸರ್ವಭೂತಹಿತೈಷಿಯೂ, ವಿದ್ವಾಂಸನೂ, ಪ್ರಿಯದರ್ಶನನೂ, ಸಮರ್ಥನೂ, ಆತ್ಮವಂತನೂ, ಜಿತಕ್ರೋಧನೂ, ದ್ಯುತಿಮಂತನೂ, ಅನಸೂಯಕನೂ, ಯುದ್ಧದಲ್ಲಿ ಯಾರನ್ನು ಎದುರಿಸಲು ದೇವತೆಗಳೂ ಹಿಂಜರಿಯುತ್ತಾರೊ ಅಂತಹವನೂ ಆದ ಮನುಷ್ಯನ ಬಗ್ಗೆ ನಿನ್ನಿಂದ ಕೇಳ ಬಯಸುತ್ತೇನೆ' ಎಂದು ತಪಸ್ವಿಯಾದ ವಾಲ್ಮೀಕಿಯು ತಪ ಸ್ವಾಧ್ಯಾಯನಿರತರಾದ ನಾರದಮುನಿಗಳನ್ನು ಕೇಳುತ್ತಾರೆ."

ಶಿಷ್ಯನಾದ ವಾಲ್ಮೀಕಿಯನ್ನು ತಪಸ್ವಿ ಎಂದು ವರ್ಣಿಸಲಾಗಿದೆ. ತಪಸ್ ಎಂದರೆ ಸಾಧಿಸಬೇಕಾದ ಆದರ್ಶದಲ್ಲಿ ಇಂದ್ರಿಯ ಮನಸ್ಸುಗಳನ್ನು ಏಕಾಗ್ರಗೊಳಿಸುವುದು. ವಿದ್ಯಾರ್ಥಿಯ ಅತಿ ಮುಖ್ಯ ಯೋಗ್ಯತೆ ಇದೇ. ಗುರು ನಾರದರು ತಪಸ್ವಿ ಮತ್ತು ನಿರಂತರ ಅಧ್ಯಯನಶೀಲರು. ಉನ್ನತ ಚಿಂತನೆಯನ್ನು ಒಂದೇ ಮಟ್ಟದಲ್ಲಿರಿಸಲು ಇವು ಸಹಕಾರಿ. ಅಲ್ಲದೆ ನಾರದರು ಸೂಕ್ಷ್ಮ ವಿಚಾರಗಳನ್ನು ಮಾತ್ರ ಮಾತನಾಡುವ ಮೌನಿಯಾದ ಮುನಿ; ವಾಗ್ವಿದಾಂ ವರಂ—ವಿಚಾರಗಳನ್ನು ಸಂವಹನ ಮಾಡುವಲ್ಲಿ ಶ್ರೇಷ್ಠ. ಇಂತಹ ಗುರುವನ್ನು ವಾಲ್ಮೀಕಿ ಹದಿನಾರು ಗುಣಗಳುಳ್ಳ ನರ ಇದ್ದಾನೆಯೇ ಎಂದು ಕೇಳಿದ್ದಾರೆ. ನಾರದರ ಉತ್ತರ ಸಂಕ್ಷಿಪ್ತ: ಹೌದು, ಅವನು ರಾಮ. ಅವನೇ ಆದರ್ಶ ಪುರುಷ, ಅಪರೂಪದ ವ್ಯಕ್ತಿ. ನಾರದರು ಹೇಳಿದ ರಾಮಕತೆಯನ್ನು ವಾಲ್ಮೀಕಿ ಮಹಾಕಾವ್ಯವನ್ನಾಗಿಸಿದರು. ಮಾನವನಿರುವವರೆಗೂ ಆದರ್ಶ ಇರುವುದು, ಆದರ್ಶ ಜೀವನ ನಡೆಸುವ ಆಸೆ ಇರುವುದು, ಅಂತಹ ಆದರ್ಶ ಜೀವನದ ಕತೆಯಾದ ರಾಮಾಯಣವೂ ಇರುವುದು.

ಮೇಲೆ ಪಟ್ಟಿಮಾಡಿದ ಈ ಗುಣಗಳನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸೋಣ : **ಗುಣವಾನ್** ಎಂದರೆ ಸದ್ಗುಣಗಳಿಂದ ಕೂಡಿದವ. **ವೀರ್ಯವಾನ್**—ಶಕ್ತಿ ಎನ್ನುವುದು ಅತಿ ಮುಖ್ಯ ಗುಣ, ಮನಸ್ಸನ್ನು ಮೋಹಗೊಳಿಸುವ ಅನೇಕ ಸಂಗತಿಗಳ ನಡುವೆ ಶಾಂತನಾಗಿರುವವನು. **ಧರ್ಮಜ್ಞ** ಎಂದರೆ ಧರ್ಮದ ಎಲ್ಲ ಮುಖಗಳನ್ನೂ ಅರಿತವನು. ಇದು ವ್ಯಾಪಕ ಗುಣ. ಧರ್ಮವನ್ನು ಅರಿತವನು ಯಾವಾಗ ಏನು ಮಾಡಬೇಕೆಂಬುದನ್ನು ತಿಳಿದವನಾಗಿರುತ್ತಾನೆ. ಅವನಲ್ಲಿ ನಿರ್ಧಾರಶಕ್ತಿ ಇರುತ್ತದೆ. ಸರಿಯಾದ ಕಾಲದಲ್ಲಿ ನಿರ್ಧಾರ ತೆಗೆದುಕೊಳ್ಳದಿದ್ದರೆ ದುರಂತ ಸಂಭವಿಸುತ್ತದೆ. **ಕೃತಜ್ಞ**—ಇತರರು ಗೈದ ಒಳಿತನ್ನು ಗಮನಿಸಿ, ಅದನ್ನು ಮೆಚ್ಚುವವನು. ಆಧುನಿಕರಲ್ಲಿ ಮಾಯವಾಗುತ್ತಿರುವ ಮೌಲ್ಯ ಇದು. ತನ್ನ ಸರ್ವತೋಮುಖವಾದ ಏಳಿಗೆಗೆ ಕಾರಣರಾದ ತಂದೆ ತಾಯಂದಿರನ್ನು ಮೆಚ್ಚುವುದಿರಲಿ, ಮುದಿಯಾದೊಡನೆ ಹೊರದೂಡುತ್ತಾರೆ. ದೇಶ, ಸಮಾಜಗಳು ತಮ್ಮ ವಿದ್ಯೆಗೆ, ಬೆಳವಣಿಗೆಗೆ ಅಪಾರ ಹಣ ವೆಚ್ಚ ಮಾಡಿದ್ದನ್ನು ಯಾರಾದರೂ ಗಮನಿಸುತ್ತಾರೆಯೇ?

> **ನನ್ನ ತಂದೆಗಾಗಿ ನನ್ನ ಪ್ರಾಣವನ್ನೇ ತ್ಯಜಿಸಲು ನಾನು ಸಿದ್ಧ. ಅವರ ಸೇವೆಗಾಗಿ ನಾನು ವಿಷವನ್ನೂ ಸೇವಿಸಬಲ್ಲೆ.—ಶ್ರೀರಾಮ**

ಕಠೋಪನಿಷತ್ತಿನಲ್ಲಿ ನಚಿಕೇತ ಕೇಳುವ ವರಗಳನ್ನು ನೋಡಿ. ಮೊದಲಿನದು ತಂದೆಯ ಸುಖ. ಎರಡನೆಯದು ಪ್ರಜೆಗಳ ಸುಖ. ಇವೆರಡೂ ನೆರವೇರಿದ ಮೇಲೆಯೇ ಆತ ಅತ್ಯುನ್ನತ ವಿದ್ಯೆಯ ವರ ಕೇಳುತ್ತಾನೆ. ತನಗಾಗಿ ಏನನ್ನೂ ಕೇಳುವುದಿಲ್ಲ. ಯಮ ಈ ರೀತಿಯನ್ನು ಮೆಚ್ಚಿ, ಇನ್ನಷ್ಟು ಇಂತಹ ಶಿಷ್ಯರಿರ ಬಾರದೇ ಎಂದುಕೊಳ್ಳುತ್ತಾನೆ. ಇತರರ ಸುಖದಲ್ಲಿ ತನ್ನ ಸುಖ ಕಾಣುವವ ಸಮಾಜಕ್ಕೆ ಒಂದು ವರ. ಸ್ವಾಮಿ ವಿವೇಕಾನಂದರು, ಕಷ್ಟಪಡುವ ಜನರ ದುಡಿಮೆಯಿಂದಾಗಿ ಶಿಕ್ಷಣ ಹೊಂದಿ, ಅವರ ಬಗ್ಗೆ ಸ್ವಲ್ಪವೂ ಯೋಚಿಸದೆ ಇರುವವನನ್ನು ದ್ರೋಹಿ ಎನ್ನುತ್ತಾರೆ. ಅಧ್ಯಕ್ಷ ಕೆನೆಡಿ ಪ್ರತಿಯೊಬ್ಬರೂ ತನ್ನನ್ನು ತಾನು ದೇಶಕ್ಕೆ ನಾನು ಏನು ಮಾಡಿದೆ, ಎಂದು ಕೇಳಿಕೊಳ್ಳಬೇಕು ಎನ್ನುತ್ತಾರೆ.

**ಸತ್ಯವಾಕ್ಯ**: ಸತ್ಯದ ಅಡಿಪಾಯವುಳ್ಳ ಈತನ ಯೋಚನೆ, ಮಾತು, ಕೃತಿ ಒಂದೇ ಆಗಿರುವುದು. ತುಂಬ ಕಾಲದವರೆಗೆ ಸತ್ಯವನ್ನು ಪಾಲಿಸಿದಾಗ, ದೃಢಚಿತ್ತ ಲಭ್ಯವಾಗಿ, ಬಾಯಿಂದ ಅಸತ್ಯವನ್ನಾಡುವುದು ಅಸಾಧ್ಯವಾಗುತ್ತದೆ, ಕೊನೆಗೆ ದೈವಸಾಕ್ಷಾತ್ಕಾರ ಉಂಟಾಗುತ್ತದೆ. ಶ್ರೀರಾಮಕೃಷ್ಣರು ಕಲಿಯುಗದಲ್ಲಿ ಸತ್ಯಕ್ಕಿಂತ ಹೆಚ್ಚಿನ ತಪಸ್ಸು ಇಲ್ಲ ಎನ್ನುತ್ತಿದ್ದರು. ಲೌಕಿಕ ವ್ಯವಹಾರದಲ್ಲೂ ಸತ್ಯವಾಕ್ಯನಿಗೇ ಮನ್ನಣೆ. ಸುಳ್ಳುಗಾರ ಕೊನೆಗೆ ಏನೊಂದನ್ನೂ ಹಿಡಿದು ಸಾಧಿಸಲಾಗದೆ ದುರಂತಕ್ಕೆ ಒಳಗಾಗುತ್ತಾನೆ.

**ದೃಢವ್ರತ** : ಒಬ್ಬನು ಜನರ, ವಸ್ತುಗಳ ಬಗ್ಗೆ, ಧರ್ಮದ ಬಗ್ಗೆ ಜ್ಞಾನಿಯಾಗಿದ್ದು, ಒಳ್ಳೆಯ ಉದ್ದೇಶವನ್ನೂ ಹೊಂದಿರಬಹುದು. ಆದರೆ ನಿರ್ಧಾರಶಕ್ತಿ ಇಲ್ಲದಿದ್ದರೆ ಅಥವಾ ನಿರ್ಧಾರವನ್ನು ಪಾಲಿಸುವ ದೃಢತೆ ಇಲ್ಲದಿದ್ದರೆ ಈ ಗುಣಗಳು ವ್ಯರ್ಥ. ಹೀಗಾಗಿ ಆದರ್ಶ ಪುರುಷನು ದೃಢವ್ರತನಾಗಿರಬೇಕು.

ಚಾರಿತ್ರ್ಯ : ಸದ್ವಂಶದಲ್ಲಿ ಹುಟ್ಟಿ, ಒಳ್ಳೆಯ ಮೌಲ್ಯಗಳನ್ನು ಅರಿತವನು ಅವನ್ನು ತನ್ನ ನಡೆಯಲ್ಲಿ ತೋರುತ್ತಾನೆ. ಶಿಕ್ಷಿತನ ಶಿಕ್ಷಣ ಅವನ ಶೀಲದಲ್ಲಿ ಕಾಣುತ್ತದೆ. ಮಹನೀಯರೆಲ್ಲ ಉತ್ತಮ ಶೀಲವುಳ್ಳವರು ಮತ್ತು ಪರೋಪಕಾರಿಗಳು.

ಸರ್ವಭೂತಹಿತೈಷಿ : ಅತ್ಯುನ್ನತ ಸಾಮಾಜಿಕ ಕಾಳಜಿ ಅಥವಾ ಜಗತ್ತಿನ ಎಲ್ಲ ಜೀವಿಗಳ ಬಗೆಗೆ ಗೌರವ ಮತ್ತು ಕಾಳಜಿಯುಳ್ಳ ವನು. ಪ್ರಪಂಚವು ದೇವರ ಅಭಿವ್ಯಕ್ತಿ. ಇದರಲ್ಲಿ ಎಲ್ಲರಿಗೂ ವಿಕಾಸದ ಅವಕಾಶವಿದೆ. ಸ್ವಾಮಿ ವಿವೇಕಾನಂದರು ಪ್ರಪಂಚವನ್ನು ಗರಡಿಮನೆ ಎನ್ನುತ್ತಾರೆ. ಮೇಲಕ್ಕೇರುವ ಪ್ರಯತ್ನದಲ್ಲಿ ಎಲ್ಲರ ಸಹಾಯಹಸ್ತ ಬೇಕು; ಇದು ಸಿಕ್ಕರೆ ಭೂಮಿ ಸ್ವರ್ಗವಾದೀತು.

**ರಾವಣನೇ ಆಶ್ರಯವನ್ನರಸಿ ನನ್ನೆಡೆಗೆ**
**ಬಂದರೂ ನಾನು ಸ್ವಲ್ಪವೂ ಹಿಂಜರಿಯದೆ**
**ಅವನನ್ನು ಸ್ವೀಕರಿಸುತ್ತೇನೆ.**
**—ಶ್ರೀರಾಮ**

ರಾವಣನ ರಥ ಮುರಿದು, ಆಯುಧಗಳೆಲ್ಲ ನಾಶವಾದಾಗ, ರಾಮನು ಅವನಿಗೆ ಆ ದಿನ ವಿಶ್ರಾಂತಿ ಹೊಂದಿ, ಮರುದಿನ ಯುದ್ಧಕ್ಕೆ ಬರುವಂತೆ ಸಲಹೆ ನೀಡುತ್ತಾನೆ! ಇದನ್ನು ಕಂಡ ಗರುಡನು ರಾಮನು ರಿಪೂಣಾಮಪಿ ವತ್ಸಲ—"ರಿಪುಗಳ ವಿಷಯದಲ್ಲಿಯೂ ವಾತ್ಸಲ್ಯವುಳ್ಳವನು," ಎಂದು ಹೇಳುತ್ತಾನೆ. ಪ್ರೀತಿಯು ತನಗೆ ವೈಯಕ್ತಿಕವಾಗಿ ಏನು ಪ್ರಯೋಜನ ಎಂದು ಚಿಂತಿಸದೆ ಪ್ರೀತಿಸುವ ವ್ಯಕ್ತಿಗೆ ಯಾವುದು ಒಳಿತು ಎಂಬುದನ್ನು ಯಾವಾಗಲೂ ನೋಡುತ್ತಿರುತ್ತದೆ.

ವಿದ್ವಾನ್ : ಕಲಿತವನು. ಹಿಂದೆ ಶಿಕ್ಷಣವೆಂದರೆ ಮನಸ್ಸನ್ನು ಶುದ್ಧಗೊಳಿಸಿ, ಆದರ್ಶಗಳಿಗೆ ಅನುಸಾರವಾಗಿ ಜೀವಿಸುವ ಯೋಗ್ಯತೆ ಯನ್ನು ನೀಡುವುದಾಗಿತ್ತು. ನಿಜವಾದ ಕಲಿಕೆ ವಿನಯವನ್ನು ತಂದುಕೊಡುವುದು.

ಸಮರ್ಥ: ಕಲಿತವ ಕೆಲಸಕ್ಕೆ ಹೆದರಲಾರ. ಪ್ರಯತ್ನಗಳಲ್ಲಿ ಗೆಲುವು ಸಾಧಿಸಲು ಕಲಿತದ್ದನ್ನು ಬಳಸುತ್ತಾನೆ. ಈ ಗುಣಗಳ ಅನುಕ್ರಮ ಹೀಗೆ: ವಿದ್ಯೆ → ವಿನಯ → ಸಾಮರ್ಥ್ಯ→ ಸುಖಸಂಪತ್ತುಗಳನ್ನು ಹೊಂದುವುದು.

ಪ್ರಿಯದರ್ಶನ : ಉದಾತ್ತಚರಿತನಲ್ಲಿ ಉತ್ತಮ ದೈಹಿಕ ಲಕ್ಷಣಗಳಿರುತ್ತವೆ. ವಕ್ರ ಬುದ್ಧಿಯುಳ್ಳವನಲ್ಲಿ ಶಾರೀರಿಕ ವಕ್ರತೆ ಗಳೂ ಇರುತ್ತವೆ. ಶ್ರೀರಾಮಕೃಷ್ಣರು ಒಬ್ಬನ ವ್ಯಕ್ತಿತ್ವವನ್ನು ಶರೀರ ಲಕ್ಷಣಗಳಿಂದ ನಿರ್ಧರಿಸುತ್ತಿದ್ದರು. ವಾಲ್ಮೀಕಿ ವರ್ಣಿಸುವಂತೆ ಅಯೋಧ್ಯೆಯ ಜನ ತಮ್ಮ ಕೆಲಸಗಳನ್ನು ಮರೆತು ರಾಮನನ್ನು ಕುರಿತು ಆಲೋಚಿಸುತ್ತಿದ್ದರಂತೆ. ರಾಮ ಎಂತಹ ಸುಂದರಾಂಗ ನೆಂದರೆ, ಅವನ ಆಲೋಚನೆಯಿಂದ ಜನರಿಗೆ ಆನಂದವಾಗಿ, ಅವನು ತಮ್ಮವ ಎಂದುಕೊಳ್ಳುತ್ತಿದ್ದರಂತೆ!

ಆತ್ಮವಾನ್ : ತನ್ನ ದೇಹ, ಮನಸ್ಸು, ಇಂದ್ರಿಯಗಳ ಮೇಲೆ ಪೂರ್ಣ ನಿಯಂತ್ರಣ ಹೊಂದಿದವನು. ಈ ಪದಕ್ಕೆ ಚಿತ್ತಸ್ಥೈರ್ಯ ಹೊಂದಿದವ, ಧೈರ್ಯಶಾಲಿ ಎಂಬ ಅರ್ಥವೂ ಇದೆ. ಸದಾ ಎಚ್ಚರದಿಂದಿದ್ದು ದೌರ್ಬಲ್ಯಕ್ಕೆ ಒಳಗಾಗದಿರುವವನು ಆತ್ಮವಾನ್.

ಜಿತಕ್ರೋಧ : ಪ್ರಶಾಂತ. ಕ್ರೋಧವು ಒಬ್ಬನ ಅಂತಃಶತ್ರು. ಸ್ಪಷ್ಟ ಯೋಚನೆಯ ಶಕ್ತಿಯನ್ನೇ ನಾಶಗೊಳಿಸುತ್ತದೆ. ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಈ ಶಾಂತತೆ ಸಹಕಾರಿ. ರಾಮ ಕ್ಷತ್ರಿಯ; ಶಿಷ್ಟರಕ್ಷಣೆಗೆ ಯುದ್ಧ ಮಾಡುವಾಗ ಕ್ರೋಧಗೊಳ್ಳಬಹುದು. ಆದರೆ ಈ ಕ್ರೋಧವು ಸ್ಪಷ್ಟಗುರಿಯನ್ನು ಹೊಂದಿದ್ದು, ಅದು ನೆರವೇರಿದೊಡನೆ ಮಾಯವಾಗುವುದು. ರಾಮನು ಉಪಶಾಂತನು, ಸದಾ ಮಾಸದ ಮುಗುಳ್ನಗೆಯುಳ್ಳವನು; ಯಾರೂ ಅವನು ಕ್ರೋಧಗೊಂಡುದನ್ನು ಕಾಣರು.

ದ್ಯುತಿವಾನ್ : ಕಾಂತಿಯುಳ್ಳವನು. ಇಂದ್ರಿಯಗಳನ್ನು ಜಯಿಸಿದ ಗುಣವಂತನ ಮುಖದಲ್ಲಿ ಕಾಂತಿ ಇರುವುದೆನ್ನುತ್ತಾರೆ. ಇದು ಆಧ್ಯಾತ್ಮಿಕ ಗುಣ; ಇದನ್ನು ನಾವು ಸಂತರಲ್ಲಿ ಕಾಣಬಹುದು, ಅನುಭವಿಸಬಹುದು.

ಅನಸೂಯಕ : ಅಸೂಯೆ ಇರದವನು. ಅಸೂಯೆ ಎಂದರೆ ಇತರರ ಗುಣದಲ್ಲೂ ದೋಷವನ್ನೇ ಕಾಣುವ ಮನಸ್ಸು. ಪರರ ಗುಣ ಪರಮಾಣುವಿನಷ್ಟಿದ್ದರೂ ಅದು ದೊಡ್ಡದೆಂದು ಭಾವಿಸ ಬೇಕು; ಪರರಲ್ಲಿ ದೋಷವನ್ನು ಎಣಿಸಬಾರದು. ಈ ಗುಣ ಕಾಣಲು ಅಪರೂಪ; ಮಹನೀಯರಲ್ಲಿ ಮಾತ್ರ ಕಾಣುವಂಥದು. ಅಂತಹವನು ಯಾವಾಗಲೂ ಸಂತೋಷವಾಗಿರುತ್ತಾನೆ.

ರಾಮನು ಮಹಾವೀರ. ಹೆದರದೆ ಕೊನೆಯವರೆಗೂ ಯುದ್ಧ ಮಾಡುವವನು. ಯುದ್ಧದಲ್ಲಿ ರಾಮನು ರೋಷಗೊಂಡಾಗ ದೇವತೆಗಳೂ ಹೆದರುವರು. ಶರಣಾಗತರನ್ನು ಕಾಪಾಡುವುದೇ ಮುಖ್ಯ ಕರ್ತವ್ಯವಾಗಿರುವ ವೀರನಿಗೆ ಇದು ಅತಿ ವಿಶಿಷ್ಟ ಗುಣ.

ಹೀಗೆ ರಾಮಾಯಣವು ಅನುಸರಿಸಲು ಅತ್ಯಪೂರ್ವವಾದ ಆದರ್ಶವನ್ನು ನಮ್ಮ ಮುಂದೆ ಇಡುತ್ತದೆ. ಕಾವ್ಯವಾಗಿ ಇದು ಹೇಗೆ ಮನಸ್ಸನ್ನು ಸೆಳೆಯುವುದೆಂದರೆ, ನಮ್ಮ ಅರಿವೇ ಇಲ್ಲದೆ ರಾಮನನ್ನು ನಾವು ಮೆಚ್ಚುತ್ತೇವೆ. ಧರ್ಮವನ್ನು ಎತ್ತಿಹಿಡಿಯುವಲ್ಲಿ ಯಾವ ತ್ಯಾಗವೂ ದೊಡ್ಡದಲ್ಲ; ವ್ಯಕ್ತಿಗಳು ಸಣ್ಣ ಪುಟ್ಟ ತ್ಯಾಗಕ್ಕೆ ಸಿದ್ಧರಿಲ್ಲ ದಿದ್ದರೆ ಸಮಾಜವೇ ಸಂಕಟಕ್ಕೆ ಒಳಗಾಗಬೇಕಾಗುತ್ತದೆ. ರಾಮನ ಆದರ್ಶಗುಣಗಳು ನಮ್ಮ ಅನುಸರಣೆಗೇ ವಿನಾ ದೂರದಿಂದ ಮೆಚ್ಚುವುದಕ್ಕಲ್ಲ. ರಾಮನನ್ನು ನಾವು ಹಿಂಬಾಲಿಸಬೇಕು.

ನಾಹಮರ್ಥಪರೋ ದೇವಿ ಲೋಕಮಾವಸ್ತುಮುತ್ಸಹೇ । ವಿದ್ಧಿ ಮಾಮೃಷಿಭಿಸ್ತುಲ್ಯಂ ವಿಮಲಂ ಧರ್ಮಮಾಸ್ಥಿತಮ್ ॥
"ನನಗೆ ಸಂಪತ್ತು ಬೇಡ. ವನಕ್ಕೆ ಹೋಗಿ ವಾಸಮಾಡುವ ಆಸೆ. ಶುದ್ಧ ಧರ್ಮವನ್ನು ಪಾಲಿಸುವ ಋಷಿಗಳಂತೆ ನಾನು ಎಂದು ತಿಳಿ." (ರಾಮನು ಕೈಕೇಯಿಗೆ ಹೇಳಿದ ಮಾತು.)